**Q.P. Code : 14102**

**First Semester B.B.A./B.B.A.M. Degree Examination,**
**November/December 2019**

*(CBCS Scheme – Freshers and Repeaters)*

**ಕನ್ನಡ ಭಾಷೆ**

**Paper I – ಕನ್ನಡ ಭಾಷಾ ಪತ್ರ**

*Time : 3 Hours]* *[Max. Marks : 70*

I. (ಅ) ಈ ಕೆಳಗಿನ ಪದ್ಯದ ಭಾವಾರ್ಥವನ್ನು ಬರೆಯಿರಿ : **(1 × 6 = 6)**

ಕಾಯ ಮೀಸಲಾಗಿ
ನಿನಗರ್ಪಿತವಾಯಿತ್ತು ಕರಣ
ಮೀಸಲಾಗಿ ನಿನಗರ್ಪಿತವಾಯಿತ್ತು
ಆನೊಂದರಿಯೆನಯ್ಯಾ ಎನ್ನಗತಿ
ನೀನಾಗಿ, ಇನ್ನ ಮತಿ ನೀನಾಗಿ, ಪ್ರಾಣ
ನಿನಗರ್ಪಿತವಾಯಿತ್ತು, ನೀನಲ್ಲದೆ
ಪೆರತೊಂದ ನೆನೆದರೆ ಆಣೆ ನಿಮ್ಮಾಣೆ
ಚನ್ನಮಲ್ಲಿಕಾರ್ಜುನ

(ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 2 = 4)**

1. ರನ್ನ
2. ವಚನ ಸಾಹಿತ್ಯ
3. ತುಂಗಭದ್ರೆ
4. ಎಂ. ಗೋಪಾಲಕೃಷ್ಣ ಅಡಿಗ

(ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಪಾಂಡವರ ಸಾಮರ್ಥ್ಯಗಳನ್ನು ದುರ್ಯೋಧನನಿಗೆ ಅರ್ಥ ಮಾಡಿಸುವ ಸಂಜಯನ ಪ್ರಯತ್ನಕ್ಕೆ ದುರ್ಯೋಧನನ ಪ್ರತಿಕ್ರಿಯ ಏನು? ಚರ್ಚಿಸಿ.
2. ಕೆಟ್ಟವನು ಸದ್ಭಕ್ತನಾಗುವ ಬಗೆಯನ್ನು ಬಸವಣ್ಣ ಹೇಗೆ ನಿರೂಪಿಸುತ್ತಾರೆ? ವಿವರಿಸಿ.

II. (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2 × 5 = 10)**

1. ಕಾಳಿಂಗಯ್ಯ ಮತ್ತು ದೇವಪ್ಪನ ನಡುವೆ ಇದ್ದ ವ್ಯಾಜ್ಯದ ಕಾರಣಗಳನ್ನು ತಿಳಿಸಿ
2. ಮಗನನ್ನು ನೋಡಲು ಹೋದ ಉಮ್ಮಾಬಿಗೆ ಆದ ಅನುಭವ
3. ಅಕ್ಕುವಿನ ಬೆಪ್ಪುತನ

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಭೂಮಿಯ ಹಂಬಲ ಹಾಗೂ ಅದಕ್ಕೆ ಸಂಬಂಧಿಸಿದ ವ್ಯಾಜ್ಯಗಳ ಕುರಿತ ಬೇಸರ "ನಾಲ್ಕು ಮೊಳ ಭೂಮಿ" ಕಥೆಯಲ್ಲಿ ಹೇಗೆ ದಾಖಲಾಗಿದೆ? ವಿವರಿಸಿ.
2. ಅಕ್ಕು ಕತೆಯ ಆಶಯವನ್ನು ಬರೆಯಿರಿ.

St. Francis College LIBRARY Koramangala, Bengaluru-34

III. (ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1 × 5 = 5)

1. ಕಂಪಣಿ ಸರಕಾರ ಯಾವ ಆದೇಶವನ್ನು ಹೊರಡಿಸಿತು?
2. ಹೊಳೆ ತಾಯಿಗೆ ಗಂಗವ್ವ ಏನೆಂದು ಪ್ರಾರ್ಥನೆ ಸಲ್ಲಿಸುತ್ತಾಳೆ?

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1 × 10 = 10)

1. ಸೊಸೆ ತನ್ನ ಅತ್ತೆ ಮತ್ತು ಗಂಡನನ್ನು ಹೇಗೆ ಸರಿ ದಾರಿಗೆ ತಂದಳು? ವಿವರಿಸಿ.
2. ಹಲಗಲಿ ಬೇಡರು ತಮ್ಮ ಉಳಿವಿಗಾಗಿ ಹೋರಾಡಿದ ಬಗೆಯನ್ನು ತಿಳಿಸಿ.

IV. (ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1 × 5 = 5)

1. ಇಂಗ್ಲೀಷ್ ಇಂಡಿಯಾಕ್ಕೆ ಬಂದಿರುವುದಕ್ಕೆ ಮುಖ್ಯ ಕಾರಣಗಳು
2. ವೃತ್ತಪತ್ರಿಕಾ ಸ್ವಾತಂತ್ರ್ಯದ ಅವಶ್ಯಕತೆ

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1 × 10 = 10)

1. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲೀಷ್-ಕನ್ನಡ ಭಾಷೆಗಳಿಗೆ ಕೊಡಬೇಕಾದ ಸ್ಥಾನ-ಮಾನದ ಬಗ್ಗೆ ಕುವೆಂಪುರವರ ನಿಲುವುಗಳನ್ನು ಸ್ಪಷ್ಟಪಡಿಸಿ.
2. ರೋಸಾ ಪಾರ್ಕ್‌ಳ ಕ್ರಾಂತಿ ಮನೋಭಾವವನ್ನು ವಿವರಿಸಿ.

---